## ನೀರಿನ ಟ್ಯಾಂಕರಿಗೆ ವಿದಾಯ

ಈರೋಡ್ ನಗರದಿಂದ 18 ಕಿ.ಮೀ. ದೂರದಲ್ಲಿದೆ 'ಪೆರುಂದುರೈಯ ಸಾಗರ್ ಇಂಟರ್‌ನ್ಯಾಶನಲ್ ಸೀನಿಯರ್ ಸೆಕೆಂಡರಿ ಸ್ಕೂಲು'. ಇಪ್ಪತ್ತೊಂದು ಎಕ್ರೆ, ಎರಡು ಬೋರ್‌ವೆಲ್ಲು, ಸಾವಿರ ವಿದ್ಯಾರ್ಥಿಗಳು. ಈ ಶಾಲೆಗೆ ದಿನಕ್ಕೆ 2.7 ಲಕ್ಷ ಲೀಟರ್ ನೀರು ಬೇಕು. ಇವರಿಗೆ ಐದಾರು ವರ್ಷಗಳಿಂದ ಟ್ಯಾಂಕರು ನೀರೇ ಆಧಾರ. ಇದಕ್ಕೇ ದಿನಕ್ಕೆ 5ರಿಂದ 7 ಸಾವಿರ ರೂಪಾಯಿ ಬೇಕು.

ಶಿವಕುಮಾರ್ ಸಲಹೆ ಕೇಳಿ ಈ ಶಾಲೆ ದೊಡ್ಡ ರೀತಿಯ ಮಳೆಕೊಯ್ಲು ಮಾಡತೊಡಗಿ ಮೂರು ಸೀಸನ್ ಸಂದಿದೆ. ಆಯಕಟ್ಟಿನ ಜಾಗಗಳಲ್ಲಿ 40 ಇಂಗುಬಾವಿ ತೋಡಿದ್ದಾರೆ. ಉಳಿಕೆ ನೀರು ಇಂಗಿಸಲು ಎರಡು ಕೊಳ. ಈ ಬಗ್ಗೆ ಐದಾರು ಲಕ್ಷ ರೂ. ವೆಚ್ಚವಾಗಿದೆ.

'ಕಳೆದ 2–3 ವರ್ಷ ನಮ್ಮಲ್ಲಿ ಮಳೆ ತುಂಬ ಕಮ್ಮಿ. ಆದರೂ ಈಗ ನೀರಿಗೇನೂ ಕೊರತೆಯಿಲ್ಲ' ಎನ್ನುವ ಶಾಲೆಯ ಕರೆಸ್ಪಾಂಡೆಂಟ್ ಸಿ. ಸೌಂದರರಾಜನ್, 'ನಮ್ಮ ಬೋರ್‌ವೆಲ್ಲುಗಳ ನೀರಿನ ಮಟ್ಟ 900 ಅಡಿಯಿಂದ 600 ಅಡಿಗೆ ಏರಿದೆ. ಲವಣಾಂಶ ಕಮ್ಮಿಯಾಗಿದೆ. 1500 ಇದ್ದುದು ಈಗ 1000ಕ್ಕೆ ಬಂದು ನಿಂತಿದೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಇದ್ದರೂ, ಇಲ್ಲದಿದ್ದರೂ. ಕೆಲಸಗಳು ನಡೆಯುತ್ತಲೇ ಇರುತ್ತವೆ. ಇಲ್ಲಿ ಅಂಥ ಸಮರ್ಥ ಸಹಾಯಕರಿದ್ದಾರೆ', ಶಿವಕುಮಾರ್ ತಿಳಿಸುತ್ತಾರೆ. 'ಇಂಗುಬಾವಿ ನಿಪುಣ ಮುನಿರಾಜು ಇದ್ದಾರೆ. ಇವರೆಲ್ಲರೂ ವಾಟ್ಸಪ್ ಮೂಲಕ ನಿರಂತರ ಸಂಪರ್ಕದಲ್ಲಿರುತ್ತಾರೆ. ಸಮಾಲೋಚನೆ ಮಾಡಿಕೊಳ್ಳುತ್ತೇವೆ. ಕೆಲಸ ಮುಂದುವರಿಯುತ್ತದೆ' ಎಂದು ತಮ್ಮ ಕೆಲಸದ ವೈಖರಿಯ ಕುರಿತು ಅವರು ವಿವರಿಸುತ್ತಾರೆ.

ಶಿವಕುಮಾರ್ ವಾಸ ಇಂಗ್ಲೆಂಡಿನ ಎಡಿನ್‌ಬರೋದಲ್ಲಿ. ಇವರ ನೀರನೆಮ್ಮದಿಯ ತವಕ, ಅದನ್ನು ಹಬ್ಬಿಸುವ ವೇಗ ಅಗಾಧ. ಅದು ಎಷ್ಟಿದೆಯೆಂದರೆ ಎಲ್ಲೇ ಪಯಣದಲ್ಲಿದ್ದರೂ, ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಈರೋಡಿನ ನೀರಿನ ಚಿಂತೆ ಅವರನ್ನು ಆವರಿಸಿರುತ್ತದೆ. 'ನಾನು ಎಲ್ಲಿದ್ದರೂ, 24x7 ನೀರಿನ ಚಿಂತನೆ, ಸಮಾಲೋಚನೆಗೆ ತೆರೆದಿದ್ದೇನೆ' ಎನ್ನುತ್ತಾರೆ.

ನೆಲಮಟ್ಟದಿಂದ ಕೆಳಗಿರುವ ನೀರೆಲ್ಲವೂ ಅಂತರ್ಜಲ. ಅಂತರ್ಜಲಕ್ಕೆ (ಗ್ರೌಂಡ್ ವಾಟರ್) ತಮಿಳಿನಲ್ಲಿ ಸುಂದರ ಹೆಸರಿದೆ. ನೆಲತ್ತಡಿ ನೀರ್. ಈ ನೆಲತ್ತಡಿ ನೀರಿನಲ್ಲಿ, ನಾವು ಬೋರ್‌ವೆಲ್ಲುಗಳ ಮೂಲಕ ಎತ್ತಿಕೊಳ್ಳುವುದು ಶಿಲಾವಲಯದ ಅಡಿಯ ತುಂಬ ಆಳದ ನೀರು. ಬಾವಿ–ಕೆರೆಗಳು ನಮಗೆ ಕರುಣಿಸುವುದು ಮೇಲುಸ್ತರದ ಜಲಧರ ಪ್ರದೇಶದ (ಶೇಲೋ ಆಕ್ವಿಫರ್) ನೀರು. ಇವೆರಡಕ್ಕೂ ಕನ್ನಡದಲ್ಲಿ ಬೇರೆಬೇರೆ ಹೆಸರು ಇದ್ದಂತಿಲ್ಲ. ಮೇಲುಜಲ (ಸರ್ಫೇಸ್ ವಾಟರ್) ಎಂದರೆ ಹೊಳೆ, ತೋಡುಗಳಲ್ಲಿ ಹರಿಯುವ ನೀರು.

### ನೆಲದಡಿಯ ಮೇಲುಜಲ

ಶೇಲೋ ಆಕ್ವಿಫರನ್ನು 'ನೆಲದಡಿಯ ಮೇಲುಜಲ' ಎಂದು ಕರೆಯೋಣ. ಇದನ್ನು ಮರುಪೂರಣಗೊಳಿಸುವುದು ಸುಲಭ. ಮರುಪೂರಣ ಬಹಳ ಕ್ಷಿಪ್ರವಾಗಿ ನಡೆಯುತ್ತದೆ. ಫಲಿತಾಂಶ ಎಂಥವರಿಗೂ ಕಣ್ಣಿಗೂ ಕಾಣುತ್ತದೆ. ಬಹುಜನ ಬಾವಿ ಬತ್ತಿ ಹೋದರೆ, ಕೊಳವೆಬಾವಿ ಕೊರೆಯುವುದೊಂದೇ ದಾರಿ ಎಂದೇ ತಿಳಿದಿದ್ದಾರೆ. ಈ ಅಸ್ಥಿರ ಕೆಲಸ ಮಾಡುವ ಬದಲು 'ನೆಲದಡಿಯ ಮೇಲುಜಲ'ಮಟ್ಟ ಏರಿಸುವುದು ಜಾಣ ನಿರ್ಧಾರ. ಈ ಉದ್ದೇಶ ಸಾಧನೆಗೆ ಇಂಗುಬಾವಿ ತುಂಬ ಪ್ರಯೋಜನಕರ. ಇಂಗಿಸಲು ಧಾರಾಳ ನೀರಿದ್ದಲ್ಲಿ ಅದರ ಮೂಲಕ ಬತ್ತಿಹೋದ ಬಾವಿಯನ್ನೂ ಮತ್ತೆ ಜಲದಾಯಿಯಾಗಿಸಬಹುದು.

''ಈರೋಡಿನಲ್ಲಿ ನಾವು ನೀರಿಗಾಗಿ ಅತಿ ಆಳಕ್ಕೆ ಇಳಿದಿದ್ದೇವೆ. ಒಂದರಿಂದ 60 ಅಡಿ ನಡುವೆ ಇರಬೇಕಾದ 'ನೆಲದಡಿಯ ಮೇಲುಜಲ' ಇಲ್ಲಿ ಇಲ್ಲವೇ ಇಲ್ಲ. ಅಪರೂಪಕ್ಕೆ ಇರುವಲ್ಲಿ ಅದು ಅತಿ ಕಲುಷಿತ. ಅದು ಎಷ್ಟು ಮಲಿನವಾಗಿದೆಯೆಂದರೆ ಕುಡಿಯುವುದು ಬಿಡಿ, ಸ್ನಾನಕ್ಕೂ ಯೋಗ್ಯವಲ್ಲ'', ಶಿವ ಬೇಸರಿಸುತ್ತಾರೆ.

ಒಂದು ಕಾಲದಲ್ಲಿ, ಅಂದರೆ, ಕಾಲು ಶತಮಾನ, ಅಥವಾ ಅದಕ್ಕೂ ಮೊದಲು ಈರೋಡು ಬಾವಿಗಳ ಊರಾಗಿತ್ತು. ಸುತ್ತಲೂ ಇರುವ ಉದ್ದಿಮೆಗಳು ಈಗ ಇಲ್ಲಿ ಬಾವಿ ನೀರಿದ್ದರೂ ಅದನ್ನು ಕುಡಿಯದಂತೆ ಮಾಡಿವೆ. ತೆರೆದ ಬಾವಿ ಚರಿತ್ರೆ ಸೇರಿದೆ. ಬಹುಶಃ ಈರೋಡಿನಲ್ಲಿ ಇಂದು ತೆರೆದ ಬಾವಿಯಿಂದ ನೀರು ಕುಡಿಯುವವರು ಬೆರಳೆಣಿಕೆಯವರು. ಶಿವಕುಮಾರ್ ಅವರಿಗೆ ಗೊತ್ತಿದ್ದಂತೆ ಅವರು ಮತ್ತು ಅನತಿ ದೂರದ ಮನೆಯ ಕದಿರೇಶನ್ – ಇಬ್ಬರು. 'ನಮ್ಮ ಈ ಭಾಗದಲ್ಲಿ ಜಲಮಾಲಿನ್ಯದ ಸಮಸ್ಯೆ ಸ್ವಲ್ಪ ಕಮ್ಮಿ' ಎನ್ನುತ್ತಾರೆ ಅವರು.

'ರೈನ್ ವಾಟರ್ ಲಿಟರೆಸಿ ಫೌಂಡೇಶನ್' ಎದುರು ಇರುವ ಸವಾಲು ಎರಡು – ಮೂರು ಥರದ್ದು. ನೀರಿನ ತೀವ್ರ ಕೊರತೆ, 'ನೆಲದಡಿ ಮೇಲುಜಲ' ಸ್ತರ ಬತ್ತಿರುವುದು ಮತ್ತು ಇದೆಲ್ಲಕ್ಕಿಂತಲೂ ಮುಖ್ಯವಾಗಿ ತೀವ್ರತರದ ಜಲಮಾಲಿನ್ಯ. ನೀರಿನ ಅಭಾವ ನೀಗಿಸಲು ಇವರ ಬಳಿ ಸಮರ್ಥ ಮಾರ್ಗಗಳಿವೆ. ಇಷ್ಟರಲ್ಲೇ ನಗರದಲ್ಲಿ ಅದ್ಭುತ ಮಾದರಿಗಳನ್ನು ಸೃಷ್ಟಿಸಿಯೂ ಇದ್ದಾರೆ. ಆದರೆ ನೀರಿನ ಮಾಲಿನ್ಯದೆದುರಿನ ಹೋರಾಟಕ್ಕೆ ಸ್ಥಾಪಿತ ಹಿತಾಸಕ್ತಿಗಳ ವಿರೋಧ ಜೋರಿದೆ.



ಇಂಗುಬಾವಿ ತೋಡಿ ರಿಂಗ್ ಪೇರಿಸುತ್ತಿದ್ದಾಗ

### ಎಳೆಯರೇ ಭರವಸೆ

ಹೀಗಾಗಿ ಶಿವಕುಮಾರ್ ಎಳೆಮನಸ್ಸುಗಳನ್ನು ಜಾಗೃತಗೊಳಿಸಲು ಹೆಚ್ಚಿನ ಸಮಯ ಕೊಡುತ್ತಿದ್ದಾರೆ. ಅವರ ಕಾರಿನಲ್ಲಿ ಸದಾ ಹತ್ತಿಪ್ಪತ್ತು ಬಾಟ್ಲಿ ಮಳೆನೀರು ಇದ್ದೇ ಇರುತ್ತದೆ. ಹೊಸಬರಿಗೆ ಮಳೆನೀರಿನ ರುಚಿ ತೋರಿಸಿದ ನಂತರವೇ ಅವರು ತನ್ನ ನೀರರಿವಿನ ಯತ್ನ ಆರಂಭಿಸುತ್ತಾರೆ.

ನೂರಾರು ಶಾಲೆಗಳಲ್ಲಿ ನೀರಿನ ತಿಳಿವಳಿಕೆ ಹಂಚುತ್ತಿದ್ದಾರೆ. ನೀರಿನ ಕೊರತೆ ಮಾತ್ರವಲ್ಲ, ಅದರ ಮಾಲಿನ್ಯ, ಚರಿತ್ರೆ, ಹಿಂದಿರುವ ರಾಜಕೀಯ – ಇತ್ಯಾದಿಗಳ ಬಗ್ಗೆಯೂ ಎಳೆಯರಿಗೆ ಎಳೆಎಳೆಯಾಗಿಯೇ ಪಾಠ ಹೇಳುತ್ತಾರೆ. ಎಳೆ ಮನಗಳು ಇಂಗಿಸಿಕೊಳ್ಳುವಷ್ಟು ಸರಳ, ಎಚ್ಚರವಾಗುವಷ್ಟು ಗಂಭೀರ ಇರುತ್ತದೆ ಅವರ ಅಂಕಿಅಂಶಯುಕ್ತ ಕ್ಲಾಸು.

'ನೀರ ಕೊರತೆಗೆ ಜನ ಚಿಂತಿಸತೊಡಗಿದ್ದಾರೆ. ಆದರೆ ಜಲಮಾಲಿನ್ಯದ ಬಗ್ಗೆ ಇನ್ನೂ ಪ್ರಜ್ಞೆ ಹುಟ್ಟಿದಂತಿಲ್ಲ', ಶಿವ ನೊಂದು ನುಡಿಯುತ್ತಾರೆ. 'ನನ್ನ ಈರೋಡಿನ ಜನರ ನೀರ ಬಡತನ ನೀಗಿ, ನೀರಿನ ಮಟ್ಟಿಗೆ ಅವರು ಸ್ವಾವಲಂಬಿಗಳಾಗಿ, ಅತಿ ಎಚ್ಚರದಿಂದ, ಆದರೆ ಸುರಕ್ಷತೆಯ ಭಯವಿಲ್ಲದೆ ಅವರು ನೀರು ಬಳಸುವಂತಾಗಬೇಕು.' ಇದು ಈ ದಣಿವರಿಯದ ಜಲಯೋಧರ ಕನಸು. ಹಾಗಾಗಬೇಕಾದರೆ, ತುರ್ತಾಗಿ ಜಲಮಾಲಿನ್ಯದ ಅವಿವೇಕಕ್ಕೆ, ನಾವೇ ಆಹ್ವಾನಿಸುವ ಸಮಸ್ಯಾ ಸರಣಿಗೆ ಕೊನೆ ಹಾಡಬೇಕು. ಅನಂತರ ತೀವ್ರತರವಾದ ಅಂತರ್ಜಲ ಭರ್ತಿಯ ಸಾಮೂಹಿಕ ಅಭಿಯಾನ ನಡೆಯಬೇಕು. ನೀರು ಮತ್ತೆ ಮಾಲಿನ್ಯ ಕಳೆದುಕೊಳ್ಳಬೇಕು. ಈ ಪ್ರಕ್ರಿಯೆ ಈಡೇರಲು ಒಂದು ಪೀಳಿಗೆಯ ಕಾಲ ಸಾಕೋ, ಸಾಲದೋ?

ಬಯಸಿದ್ದರೆ ಶಿವಕುಮಾರ್ ಊರಿಗೆ ಬಂದಾಗ ಆರಾಮವಾಗಿ ಇರಬಹುದಾಗಿತ್ತು. ವಿದೇಶದಲ್ಲಿ ತಂಪಾಗಿ 'ಕುಳಿತು ತಿನ್ನುವ' ಸೌಭಾಗ್ಯ ಇರುವವರಲ್ಲಿ ಇಂಥ ದೂರದೃಷ್ಟಿಯ ತಪಸ್ಸಿಗೆ ಏರುವವರು ಕೋಟಿಗೊಬ್ಬರೇನೋ. ಈ ಇಂಗ್ಲೆಂಡ್ ಪ್ರಜೆ ವರ್ತಮಾನದ ಸುಖ ಮರೆತು ತನ್ನೂರಿನ ಪೀಳಿಗೆಯ ದಶಕಗಳ ನಂತರದ ನೆಮ್ಮದಿಗಾಗಿ ಹಟ ಹಿಡಿದು ಹೋರಾಡುತ್ತಿದ್ದಾರೆ. ದೇಶದ ಹಲವೆಡೆ ಗಂಗೆಯನ್ನು ಮತ್ತೆ ಪವಿತ್ರವಾಗಿಸುವ ಕಾಯಕಕ್ಕೆ ಈ ಶಿವ ಸ್ಫೂರ್ತಿಯಾಗಲಿ.

ಶಿವಕುಮಾರ್ ಕೆ. ಸಂಪರ್ಕ:
+91 98947 97501, +44 7906 290617.